77

ಆಯತುಲ್ ಕುರ್ಸೀ

ಅರ್ಥ ಮತ್ತು ವಿವರಣೆ



الحركة النصيحة الإسلامية
ANNASEEHA ISLAMIC MOVEMENT
Suratkal, Mangalore - 575014
74118 55190 / 97315 93091

ಅಲ್ಲಾಹು ಲಾ ಇಲಾಹ ಇಲ್ಲಾ ಹುವ (ಅಲ್ಲಾಹು, ಅವನ ಹೊರತು ಆರಾಧನೆಗೆ ಬೇರೆ ನೈಜ ಹಕ್ಕುದಾರರಿಲ್ಲ)

ಆರಾಧನೆಯ ವಿಷಯದಲ್ಲಿ ಅಲ್ಲಾಹು ಏಕೈಕನು. ಆ ಅರ್ಹತೆಯಿರುವುದು ಅವನಿಗೆ ಮಾತ್ರ. ಆರಾಧನೆಗೆ ಅವನಲ್ಲದೆ ಬೇರೆ ನಿಜವಾದ ಹಕ್ಕುದಾರರಿಲ್ಲ. ಆರಾಧನೆಯನ್ನು ಸ್ವೀಕರಿಸುವ ನಿಜವಾದ ಹಕ್ಕಿರುವುದು ಅಲ್ಲಾಹನಿಗೆ ಮಾತ್ರ. ಆದ್ದರಿಂದ ಅವನನ್ನು ಮಾತ್ರ ಆರಾಧಿಸಬೇಕಾಗಿದೆ. ಅವನಲ್ಲದ ಯಾರಿಗೂ ಆರಾಧನೆಯನ್ನು ಸ್ವೀಕರಿಸುವ ಹಕ್ಕಿಲ್ಲದಿರುವುದರಿಂದ ಅವರನ್ನು ಆರಾಧಿಸುವುದು ವ್ಯರ್ಥ. ಮಾತ್ರವಲ್ಲ, ಅವರನ್ನು ಆರಾಧಿಸುವುದು ಅಲ್ಲಾಹನಿಗೆ ಮಾಡುವ ದ್ರೋಹವಾಗಿದೆ. ಏಕೆಂದರೆ ನಮ್ಮನ್ನು ಅಸ್ತಿತ್ವಕ್ಕೆ ತಂದು ನಮಗೆ ಬೇಕಾದ ಎಲ್ಲವನ್ನೂ ನೀಡಿದವನು ಅಲ್ಲಾಹು. ಅವನು ನಮಗೆ ದಯಪಾಲಿಸಿದ ಅನುಗ್ರಹಗಳು ಅಸಂಖ್ಯವಾಗಿದ್ದು ಅವುಗಳನ್ನು

ಎಣಿಸಲು ಕೂಡ ಸಾಧ್ಯವಿಲ್ಲ. ಹೀಗಿರುವಾಗ, ಅವನ ಅನುಗ್ರಹಗಳನ್ನು ಸವಿಯುತ್ತಾ ಅವನನ್ನು ಬಿಟ್ಟು ಬೇ-ರೆಯವರನ್ನು ಆರಾಧಿಸುವುದು ಅವನಿಗೆ ಮಾಡುವ ದ್ರೋಹವಾಗಿದೆ. ಇದನ್ನು ಅಲ್ಲಾಹು ಸುತರಾಂ ಇಷ್ಟ-ಪಡುವುದಿಲ್ಲ. ಈ ಪಾಪವನ್ನು ಅವನು ಕ್ಷಮಿಸುವುದೂ ಇಲ್ಲ. “ತನ್ನೊಡನೆ ಇನ್ನೊಬ್ಬರನ್ನು ಪಾಲುದಾರರನ್ನಾಗಿ ಮಾಡುವುದನ್ನು ಅಲ್ಲಾಹು ಸುತರಾಂ ಕ್ಷಮಿಸುವುದಿ-ಲ್ಲ. ಅದಲ್ಲದ ಇತರ ಪಾಪಗಳನ್ನು ಅವನಿಚ್ಛಿಸುವವರಿಗೆ ಅವನು ಕ್ಷಮಿಸುತ್ತಾನೆ.” (4:48,116)

‘ಲಾ ಇಲಾಹ ಇಲ್ಲಲ್ಲಾಹ್’ ಎಂಬ ವಾಕ್ಯವು ನಿಷೇಧ ಮತ್ತು ದೃಢೀಕರಣವನ್ನು ಒಳಗೊಂಡಿದೆ. ‘ಲಾ ಇಲಾಹ’ (ಆರಾಧನೆಗೆ ನೈಜ ಹಕ್ಕುದಾರರಿಲ್ಲ) ಎಂಬ ಇದರ ಮೊದಲ ಭಾಗವು ಆರಾಧನೆಯ ಅರ್ಹತೆಯನ್ನು ಸಂ-ಪೂರ್ಣವಾಗಿ ಮತ್ತು ಸಾರ್ವತ್ರಿಕವಾಗಿ ನಿಷೇಧಿಸುತ್ತದೆ. ಅಂದರೆ ಈ ಜಗತ್ತಿನಲ್ಲಿರುವ ಯಾರಿಗೂ ಆರಾಧನೆಯ-

ನ್ನು ಸ್ವೀಕರಿಸುವ ಅರ್ಹತೆಯಿಲ್ಲ. ಯಾರೂ ಆರಾಧನೆಗೆ ಅರ್ಹರಲ್ಲ. ನಂತರ 'ಇಲ್ಲಲ್ಲಾಹ್' (ಅಲ್ಲಾಹನ ಹೊರತು) ಎಂಬ ಇದರ ಎರಡನೇ ಭಾಗವು ಆರಾಧನೆಯ ಅರ್ಹತೆಯನ್ನು ಅಲ್ಲಾಹನಿಗೆ ಮಾತ್ರ ಸ್ಥಾಪಿಸುತ್ತದೆ. ಅಂದರೆ ಈ ಜಗತ್ತಿನಲ್ಲಿ ಆರಾಧನೆಯನ್ನು ಸ್ವೀಕರಿಸುವ ಹಕ್ಕಿರುವುದು ಅಲ್ಲಾಹನಿಗೆ ಮಾತ್ರ. ಅವನು ಮಾತ್ರ ಆರಾಧನೆಗೆ ಅರ್ಹ.

'ಅಲ್ಲಾಹು' ಅಲ್ಲಾಹನ ಅತಿಸುಂದರ ಹೆಸರುಗಳಲ್ಲಿ ಒಂದಾಗಿದೆ.

ಅಲ್‌ಹಯ್ಯು
(ನಿರಂತರ ಬದುಕಿರುವವನು)

ಅಲ್ಲಾಹನ ಬದುಕು ಸಂಪೂರ್ಣತೆಯ ಎಲ್ಲಾ ಗುಣಗಳನ್ನು ಒಳಗೊಂಡ ಸಂಪೂರ್ಣ ಬದುಕಾಗಿದೆ. ಅದು ನಿರಂತರವಾಗಿದೆ. ಆ ಬದುಕಿಗೆ ಆರಂಭವಿಲ್ಲ. ಅಂತ್ಯವೂ ಇಲ್ಲ. ಆ ಬದುಕಿಗೆ ಯಾವುದೇ ಅಪೂರ್ಣ-

ತೆ, ಕೊರತೆ, ತೊಡಕುಗಳಿಲ್ಲ. ಮಾನವನಿಗೂ ಬದುಕು (ಹಯಾತ್) ಎಂಬ ಗುಣವಿದೆ. ಆದರೆ ಆ ಗುಣ ಅಲ್ಲಾಹನ ಗುಣದಂತೆ ಸಂಪೂರ್ಣವಲ್ಲ.

'ಅಲ್‌ಹಯ್ಯ್' ಅಲ್ಲಾಹನ ಅತಿಸುಂದರ ಹೆಸರುಗಳಲ್ಲಿ ಒಂದಾಗಿದೆ.

ಅಲ್‌ಕಯ್ಯೂಮ್
(ಸ್ವಯಂ ಅಸ್ತಿತ್ವದಲ್ಲಿರುವವನು, ಇತರರಿಗೆ ಅಸ್ತಿತ್ವವನ್ನು ನೀಡುವವನು)

ಅಲ್ಲಾಹು ಇನ್ನೊಬ್ಬರನ್ನು ಅವಲಂಬಿಸದೆ ಸ್ವಯಂ ಅಸ್ತಿತ್ವದಲ್ಲಿರುವವನು. ಅವನ ಅಸ್ತಿತ್ವಕ್ಕೆ ಇತರರ ಆವಶ್ಯಕತೆಯಿಲ್ಲ. ಅವನ ಅಸ್ತಿತ್ವಕ್ಕೆ ಆಹಾರ–ಪಾನೀಯ ಅಥವಾ ಇತರ ವಸ್ತುಗಳ ಅಗತ್ಯವಿಲ್ಲ. ಆದರೆ ಅಲ್ಲಾಹು ಅಲ್ಲದವರಿಗೆ ಆಹಾರ–ಪಾನೀಯ ಮತ್ತಿತರ ವಸ್ತುಗಳ ಅಗತ್ಯವಿದೆ. ಏಕೆಂದರೆ ಅವರು ಸ್ವಯಂ ಅಸ್ತಿತ್ವದಲ್ಲಿರುವವರಲ್ಲ. ಅವರ ಅಸ್ತಿತ್ವಕ್ಕೆ ಇನ್ನೊಬ್ಬರ ಆವಶ್ಯಕತೆಯಿದೆ.

ಸೃಷ್ಟಿಗಳೆಲ್ಲರೂ ತಮ್ಮ ಸೃಷ್ಟಿ, ಬೆಳವಣಿಗೆಯ ವಿಷಯದಲ್ಲಿ ಅಲ್ಲಾಹನನ್ನು ಸಂಪೂರ್ಣವಾಗಿ ಅವಲಂಬಿಸುತ್ತಾರೆ. ಅಲ್ಲಾಹನನ್ನು ಅವಲಂಬಿಸದೆ ಒಂದು ಕ್ಷಣ ಕೂಡ ಅಸ್ತಿತ್ವದಲ್ಲಿರಲು ಯಾರಿಗೂ ಸಾಧ್ಯವಿಲ್ಲ.

ಇತರರಿಗೆ ಅಸ್ತಿತ್ವವನ್ನು ನೀಡುವವನು ಎಂದರೆ ಇತರರ ಅಸ್ತಿತ್ವಕ್ಕೆ ಬೇಕಾದ ಎಲ್ಲವನ್ನೂ ಒದಗಿಸಿಕೊಡುವವನು. ಅಲ್ಲಾಹು ಇತರರ ಅಸ್ತಿತ್ವಕ್ಕೆ ಕಾರಣನಾಗಿದ್ದಾನೆ. ಅವನು ಇತರರಿಗೆ ಅಸ್ತಿತ್ವವನ್ನು ನೀಡುವವನಾದ್ದರಿಂದ ಅವನ ಹೊರತು ಎಲ್ಲರೂ ಅವನ ಮೇಲೆ ಅವಲಂಬಿತರು. ‘ಅಲ್‌ಕಯ್ಯೂಮ್’ ಅಲ್ಲಾಹನ ಅತಿಸುಂದರ ಹೆಸರುಗಳಲ್ಲಿ ಒಂದಾಗಿದೆ.

ಮೇಲಿನ ಎರಡು ಹೆಸರುಗಳು ಕುರ್‌ಆನಿನ ಅನೇಕ ಸ್ಥಳಗಳಲ್ಲಿ ಒಟ್ಟಾಗಿ ಬಂದಿರುವುದನ್ನು ಕಾಣಬಹುದು. ಈ ಎರಡು ಹೆಸರುಗಳು ಒಟ್ಟಾಗಿ ಬರುವಾಗ ಅವು ಅಲ್ಲಾಹನ ಅಸ್ತಿತ್ವದ ಸಂಪೂರ್ಣತೆ ಮತ್ತು ಅಲ್ಲಾಹನ ಅಧಿಕಾ-

ರದ ಸಂಪೂರ್ಣತೆಯನ್ನು ಸೂಚಿಸುತ್ತವೆ.

> ಲಾ ತಅ್‌ಖುಝುಹೂ ಸಿನತುನ್ ವಲಾ ನೌಮುನ್
> (ತೂಕಡಿಕೆಯಾಗಲಿ ನಿದ್ದೆಯಾಗಲಿ ಅವನನ್ನು ವಶಪಡಿಸುವುದಿಲ್ಲ)

'ಸಿನತ್' ಎಂದರೆ ತೂಕಡಿಕೆ. ಅದು ನಿದ್ದೆಗಿಂತ ಮೊದಲು ಉಂಟಾಗುತ್ತದೆ. ಇಲ್ಲಿ ಅಲ್ಲಾಹನ ಬಗ್ಗೆ, 'ಅವನು ನಿದ್ದೆ ಮಾಡುವುದಿಲ್ಲ' ಎಂದು ಹೇಳಿಲ್ಲ. ಬದಲಾಗಿ ನಿದ್ದೆಯು ಅವನನ್ನು ವಶಪಡಿಸುವುದಿಲ್ಲ ಎಂದು ಹೇಳಲಾಗಿದೆ. ಅಂದರೆ ಅವನು ಒಂದು ಕ್ಷಣ ಕೂಡ ತೂಕಡಿಸುವುದಿಲ್ಲ, ಒಂದು ಕ್ಷಣ ಕೂಡ ನಿದ್ದೆಗೆ ಒಳಗಾಗುವುದಿಲ್ಲ. ವಶಪಡಿಸುವುದು ಕೆಲವೊಮ್ಮೆ ಬಲವಂತದಿಂದಲೂ ಆಗಿರಬಹುದು. ಅಲ್ಲಾಹನನ್ನು ನಿದ್ದೆಯ ಮೂಲಕವಾದರೂ ಒಂದು ಕ್ಷಣ ಕೂಡ ವಶಪಡಿಸಿಕೊಳ್ಳಲು ಯಾರಿಗೂ ಸಾಧ್ಯವಿಲ್ಲ.

ನಿದ್ದೆಯು ಅಸಂಪೂರ್ಣತೆಯನ್ನು ಸೂಚಿಸುವ ಗುಣ-

ವಾಗಿದೆ. ಈಗಾಗಲೇ ಮಾಡಿದ ಒಂದು ಕೆಲಸದಿಂದ ಸುಸ್ತಾಗಿ ದೇಹವು ದಣಿದು ಆರಾಮವನ್ನು ಬಯಸು-ವಾಗ, ಅಥವಾ ಮುಂದೆ ಮಾಡಲಿರುವ ಕೆಲಸಕ್ಕೆ ಶಕ್ತಿ-ಪಡೆಯುವುದಕ್ಕೆ ನಿದ್ದೆಯ ಅಗತ್ಯ ಬರುತ್ತದೆ. ಅಲ್ಲಾಹನ ಗುಣ ವಿಶೇಷಣಗಳೆಲ್ಲವೂ ಸಂಪೂರ್ಣವಾಗಿರುವುದ-ರಿಂದ ನಿದ್ದೆ ಮತ್ತು ತೂಕಡಿಕೆಯೆಂಬ ಗುಣವಿಶೇಷಣಗಳು ಅವನಿಗೆ ಹೊಂದಿಕೆಯಾಗುವುದಿಲ್ಲ.

ಲಹೂ ಮಾ ಫಿ ಸ್ಸಮಾವಾತಿ ವಮಾ ಫಿಲ್ ಅರ್ಧಿ
(ಆಕಾಶಗಳಲ್ಲಿರುವುದೆಲ್ಲವೂ ಮತ್ತು
ಭೂಮಿಯಲ್ಲಿರುವುದೆಲ್ಲವೂ ಅವನದ್ದಾಗಿವೆ)

ಆಕಾಶಗಳು ಮತ್ತು ಭೂಮಿ ಎಂದರೆ ಈ ಸಂಪೂರ್ಣ ವಿಶ್ವ. ವಿಶ್ವದಲ್ಲಿರುವ ಎಲ್ಲವೂ ಅಲ್ಲಾಹನದ್ದು. ಅವೆಲ್ಲ-ವೂ ಅವನ ಸೃಷ್ಟಿ. ಎಲ್ಲವೂ ಅವನ ನಿಯಂತ್ರಣದಲ್ಲಿ-ವೆ. ಅವನ ಮಾಲಕತ್ವದಲ್ಲಿವೆ. ಅವನ ಸ್ವಾಧೀನದಲ್ಲಿವೆ. ವಿಶ್ವದ ಸಂಪೂರ್ಣ ಆಡಳಿತ ಮತ್ತು ಅಧಿಕಾರ ಅಲ್ಲಾ-

ಹನಿಗೆ ಸೇರಿದ್ದು. ಅವನೇ ವಿಶ್ವದ ನಿಜವಾದ ಆಡಳಿತ-ಗಾರ. ಅವೆಲ್ಲವನ್ನೂ ರಕ್ಷಿಸಬೇಕಾದವನು ಮತ್ತು ಪರಿ-ಪಾಲಿಸಬೇಕಾದವನು ಅವನೇ. "ಆಕಾಶಗಳ ಮತ್ತು ಭೂಮಿಯ ಒಡೆತನವು ಅಲ್ಲಾಹನಿಗೆ ಸೇರಿದ್ದು. ಜೀವ ಮತ್ತು ಮರಣವನ್ನು ನೀಡುವವನು ಅವನೇ. ಅವನ-ಲ್ಲದೆ ನಿಮಗೆ ಬೇರೆ ರಕ್ಷಕರೋ ಸಹಾಯಕರೋ ಇಲ್ಲ." (ಕುರ್‌ಆನ್ 9:116) "ಆಕಾಶಗಳ ಮತ್ತು ಭೂಮಿಯ ಒಡೆತನವು ಅವನಿಗೆ ಸೇರಿದ್ದು. ಅವನು ಯಾರನ್ನೂ ಮಗನನ್ನಾಗಿ ಮಾಡಿಕೊಂಡಿಲ್ಲ. ಒಡೆತನದಲ್ಲಿ (ಅಥವಾ ಆಡಳಿತದಲ್ಲಿ) ಅವನಿಗೆ ಯಾವುದೇ ಪಾಲುದಾರರಿಲ್ಲ. ಅವನು ಎಲ್ಲಾ ವಸ್ತುಗಳನ್ನು ಸೃಷ್ಟಿಸಿ ಅವುಗಳಿಗೆ ನಿರ್ಣ-ಯವನ್ನು ನಿರ್ಣಯಿಸಿದ್ದಾನೆ." (ಕುರ್‌ಆನ್ 25:2) ಅಲ್ಲಾ-ಹನ ಮಾಲಕತ್ವ ಮತ್ತು ಆಡಳಿತ ಸಂಪೂರ್ಣವಾಗಿದೆ. ಅವನ ಆಡಳಿತ ಮತ್ತು ಅಧಿಕಾರ ಸಂಪೂರ್ಣ ವಿಶ್ವವನ್ನು ಆವರಿಸಿಕೊಂಡಿದೆ. ವಿಶ್ವದಲ್ಲಿರುವ ಯಾವುದೂ ಅವನ

ಆಡಳಿತ ಅಥವಾ ಒಡೆತನದಿಂದ ಹೊರತಲ್ಲ.

> ಮನ್ ಝುಲ್ಲಝೀ ಯಶ್ಫಉ ಇಂದಹೂ ಇಲ್ಲಾ ಬಿ ಇಝ್ನಿಹೀ
> (ಅವನ ಅಪ್ಪಣೆಯಿಲ್ಲದೆ ಅವನ ಬಳಿ ಶಫಾಅತ್ (ಮಧ್ಯಸ್ತಿಕೆ) ಮಾಡುವವನು ಯಾರು?)

ಶಫಾಅತ್ ಎಂದರೆ ಹಿತವನ್ನು ನೀಡಲು ಅಥವಾ ಕಷ್ಟವನ್ನು ನಿವಾರಿಸಲು ಬೇರೊಬ್ಬರಿಗೆ ಮಧ್ಯವರ್ತಿಯಾಗುವುದು. ಅಂದರೆ ಒಬ್ಬ ವ್ಯಕ್ತಿಯ ಪರವಾಗಿ ಅವನಿಗೆ ಹಿತವನ್ನು ನೀಡಲು ಅಥವಾ ಅವನಿಂದ ಕಷ್ಟವನ್ನು ನಿವಾರಿಸಲು ಅಲ್ಲಾಹನ ಮುಂದೆ ಮಧ್ಯಸ್ಥಿಕೆ ಮಾಡುವುದು. ಪುನರುತ್ಥಾನ ದಿನ ಮಹ್ಶರದಲ್ಲಿ ನಿಂತಿರುವವರ ಗೋಳು ಕಂಡು ಪ್ರವಾದಿಯವರು(ಸ) ಅವರ ಪರವಾಗಿ ಶಫಾಅತ್ (ಮಧ್ಯಸ್ತಿಕೆ) ಮಾಡುತ್ತಾರೆ. ಅಂದರೆ ಅವರನ್ನು ವಿಚಾರಣೆಗೆ ಕರೆಯಬೇಕೆಂದು ಅಲ್ಲಾಹನಲ್ಲಿ ಬೇಡಿಕೊಳ್ಳುತ್ತಾರೆ. ಇದು ಕಷ್ಟವನ್ನು ನಿವಾರಿಸುವುದಕ್ಕಾ-

ಗಿದೆ. ಅದೇ ರೀತಿ ಸ್ವರ್ಗವಾಸಿಗಳು ಸ್ವರ್ಗವನ್ನು ಪ್ರವೇಶಿಸುವುದಕ್ಕಾಗಿ ಪ್ರವಾದಿಯವರು(ಸ) ಶಫಾಅತ್ (ಮಧ್ಯಸ್ತಿಕೆ) ಮಾಡುತ್ತಾರೆ. ಇದು ಹಿತವನ್ನು ನೀಡುವುದಕ್ಕಾಗಿದೆ.

'ಅವನ ಬಳಿ' ಎಂದರೆ ಅಲ್ಲಾಹನ ಬಳಿ ಎಂದರ್ಥ. 'ಅವನ ಅಪ್ಪಣೆಯಿಲ್ಲದೆ' ಎಂದರೆ ಶಫಾಅತ್ (ಮಧ್ಯಸ್ಥಿಕೆ) ಮಾಡುವವನಿಗೆ ಶಫಾಅತ್ ಮಾಡಲು ಅಲ್ಲಾಹನ ಅಪ್ಪಣೆ ಕಡ್ಡಾಯ. ಅಲ್ಲಾಹನ ಅಪ್ಪಣೆಯಿಲ್ಲದೆ ಶಫಾಅತ್ ಮಾಡಲು ಯಾರಿಗೂ ಸಾಧ್ಯವಿಲ್ಲ. ಅಲ್ಲಾಹು ಅಪ್ಪಣೆ ಕೊಡಬೇಕಾದರೆ ಶಫಾಅತ್ (ಮಧ್ಯಸ್ಥಿಕೆ) ಮಾಡುವವರ ಬಗ್ಗೆ ಅಲ್ಲಾಹು ಸಂತೃಪ್ತನಾಗಿರಬೇಕು. ಅವನ ಕೃಪೆಗೆ ಪಾತ್ರರಾಗದ ಯಾರಿಗೂ ಅವನು ಮಧ್ಯಸ್ಥಿಕೆ ಮಾಡಲು ಅಪ್ಪಣೆ ಕೊಡುವುದಿಲ್ಲ. ಅದೇ ರೀತಿ ಯಾರ ಪರವಾಗಿ ಮಧ್ಯಸ್ಥಿಕೆ ಮಾಡಲಾಗುತ್ತದೋ ಅವನ ಬಗ್ಗೆಯೂ ಅಲ್ಲಾಹು ಸಂತೃಪ್ತನಾಗಿರಬೇಕು.

ಶಫಾಅತ್ (ಮಧ್ಯಸ್ಥಿಕೆ)ಗೆ ಸಂಬಂಧಿಸಿದಂತೆ ಮೂರು

ಷರತ್ತುಗಳಿವೆ.

- ✓ ಶಫಾಅತ್ ಮಾಡುವವರು ಅಲ್ಲಾಹನ ಸಂತೃಪ್ತಿಗೆ ಪಾತ್ರರಾಗಿರಬೇಕು.
- ✓ ಯಾರ ಪರವಾಗಿ ಶಫಾಅತ್ ಮಾಡಲಾಗುತ್ತದೋ ಅವರ ಬಗ್ಗೆ ಅಲ್ಲಾಹು ಸಂತೃಪ್ತನಾಗಿರಬೇಕು.
- ✓ ಶಫಾಅತ್ ಮಾಡುವವರು ಶಫಾಅತ್ ಮಾಡಲು ಅಲ್ಲಾಹನ ಅಪ್ಪಣೆ ಪಡೆಯಬೇಕು.

“ಅಲ್ಲಾಹನ ಸಂತೃಪ್ತಿಗೆ ಪಾತ್ರರಾದವರಲ್ಲದೆ ಇನ್ನಾರೂ ಶಫಾಅತ್ ಮಾಡುವುದಿಲ್ಲ.” (ಕುರ್‌ಆನ್ 21:28) “ಪರಮ ದಯಾಮಯನು (ಅಲ್ಲಾಹು) ಯಾರಿಗೆ ಅಪ್ಪಣೆ ಕೊಡುತ್ತಾನೋ ಮತ್ತು ಯಾರ ಮಾತನ್ನು ಇಷ್ಟಪಡುತ್ತಾನೋ ಅವರಲ್ಲದೆ ಇನ್ನಾರೂ ಶಫಾಅತ್ (ಮಧ್ಯಸ್ಥಿಕೆ) ಮಾಡಿ ಪ್ರಯೋಜನವಿಲ್ಲ.” (ಕುರ್‌ಆನ್ 20:109) “ಆಕಾಶದಲ್ಲಿ ಎಷ್ಟೋ ದೇವದೂತರಿದ್ದಾರೆ. ಅಲ್ಲಾಹು ಅವನಿಚ್ಛಿಸಿದವರ ಮತ್ತು ಅವನ ಸಂತೃಪ್ತಿಗೆ

ಪಾತ್ರರಾದವರ ಪರವಾಗಿ ಶಫಾಅತ್ ಮಾಡಲು ಅಪ್ಪಣೆ ಕೊಟ್ಟ ಬಳಿಕವಲ್ಲದೆ ಅವರಲ್ಲಿ (ದೇವದೂತರಲ್ಲಿ) ಯಾರ ಶಫಾಅತ್‌ನಿಂದಲೂ ಯಾವುದೇ ಪ್ರಯೋಜನವಿಲ್ಲ." (ಕುರ್‌ಆನ್ 53:26) ಅಲ್ಲಾಹನ ಅಪ್ಪಣೆಯ ವಿನಾ ಯಾರಿಗೂ ಮಧ್ಯಸ್ಥಿಕೆ ಮಾಡಲು ಸಾಧ್ಯವಿಲ್ಲ. ಅಲ್ಲಾ-ಹನ ಅಧಿಕಾರವು ಸಂಪೂರ್ಣವಾಗಿದೆ. ಅವನ ಬಳಿ ಪ್ರಭಾವ ಬೀರಿ ಮಧ್ಯಸ್ಥಿಕೆ ಮಾಡುವ ಅಧಿಕಾರವನ್ನು ಪಡೆಯಲು ಯಾರಿಗೂ ಸಾಧ್ಯವಿಲ್ಲ. ಆ ಅಧಿಕಾರ ಸಿಗ-ಬೇಕಾದರೆ ಅಲ್ಲಾಹನ ಸಂತೃಪ್ತಿಗೆ ಪಾತ್ರರಾಗುವುದಲ್ಲದೆ ಬೇರೆ ದಾರಿಯಿಲ್ಲ.

> ಯಅ್‌ಲಮು ಮಾ ಬೈನ ಅಯ್ದೀಹಿಮ್ ವಮಾ ಖಲ್‌ಫಹುಮ್
> (ಅವರ ಮುಂಭಾಗದಲ್ಲಿರುವುದನ್ನು ಮತ್ತು ಅವರ ಹಿಂಭಾಗದಲ್ಲಿರುವುದನ್ನು ಅವನು ಅರಿಯುತ್ತಾನೆ)

'ಅವರ ಮುಂಭಾಗದಲ್ಲಿರುವುದು' ಎಂದರೆ ಭವಿಷ್ಯ.

'ಅವರ ಹಿಂಭಾಗದಲ್ಲಿರುವುದು' ಎಂದರೆ ಭೂತ. 'ಅವರು' ಎಂದರೆ ವಿಶ್ವದಲ್ಲಿರುವ ಸೃಷ್ಟಿಗಳು. ಅಂದರೆ ತನ್ನ ಸೃಷ್ಟಿಗಳಿಗೆ ಮುಂದೆ ಏನಾಗಲಿದೆ ಮತ್ತು ಅವರು ಈಗಾಗಲೇ ಏನು ಮಾಡಿದ್ದಾರೆ ಎನ್ನುವುದನ್ನು ಅಲ್ಲಾಹು ಅರಿಯುತ್ತಾನೆ. ಅಲ್ಲಾಹು ತ್ರಿಕಾಲ ಜ್ಞಾನಿ. ಅವನ ಜ್ಞಾನವು ಸಂಪೂರ್ಣವಾಗಿದ್ದು ಈ ವಿಶ್ವದಲ್ಲಿರುವ ಎಲ್ಲ-ವನ್ನೂ ಅವನು ತಿಳಿದಿದ್ದಾನೆ. ಗೋಚರ ಮತ್ತು ಅಗೋ-ಚರವಾಗಿರುವ ಎಲ್ಲವೂ ಅವನಿಗೆ ತಿಳಿದಿದೆ. ಅವನ ಜ್ಞಾ-ನಕ್ಕೆ ಒಳಪಡದ ಯಾವುದೇ ವಿಷಯ ಅಥವಾ ವಸ್ತು ಈ ಜಗತ್ತಿನಲ್ಲಿಲ್ಲ. "ಅಗೋಚರ ಜ್ಞಾನಗಳ ಕೀಲಿಕೈಗಳಿರುವು-ದು ಅಲ್ಲಾಹನಲ್ಲಿ. ಅವುಗಳನ್ನು ಅವನಲ್ಲದೆ ಇನ್ನಾರೂ ಅರಿತಿಲ್ಲ. ನೆಲ–ಜಲಗಳಲ್ಲಿರುವ ಎಲ್ಲವನ್ನೂ ಅವನು ಅರಿಯುತ್ತಾನೆ. ಅವನ ಅರಿವಿಗೆ ಬಾರದೆ ಒಂದು ಎಲೆಯೂ ಉದುರುವುದಿಲ್ಲ. ಭೂಮಿಯ ಅಂಧಕಾ-ರಗಳಲ್ಲಿ ಹುದುಗಿರುವ ಹಸಿಯಾದ ಅಥವಾ ಒಣಗಿದ

ಧಾನ್ಯವು ಕೂಡ ಒಂದು ಸ್ಪಷ್ಟ ಗ್ರಂಥದಲ್ಲಿ ದಾಖಲಾಗದೆ ಬಿಟ್ಟಿಲ್ಲ." (ಕುರ್‌ಆನ್ 6:59)

> ವಲಾ ಯುಹೀತೂನ ಬಿಶೈಇನ್ ಮಿನ್ ಇಲ್ಮಿಹೀ
> ಇಲ್ಲಾ ಬಿಮಾ ಶಾಅ
> (ಅವನ ಜ್ಞಾನದಿಂದ ಅವನು ಬಯಸಿದ್ದನ್ನಲ್ಲದೆ
> ಬೇರೇನನ್ನೂ ಆವರಿಸಿಕೊಳ್ಳಲು ಅವರಿಗೆ ಸಾಧ್ಯವಿಲ್ಲ)

ಜಗತ್ತಿನಲ್ಲಿರುವವರಿಗೆ ಅಲ್ಲಾಹನ ಜ್ಞಾನದಿಂದ ಅವನು ಬಯಸುವುದನ್ನಲ್ಲದೆ (ಅಂದರೆ ಅವನು ತಿಳಿಸಿಕೊಡು-ವುದನ್ನಲ್ಲದೆ) ಬೇರೇನನ್ನೂ ಅರಿಯಲು ಸಾಧ್ಯವಿಲ್ಲ. ಇದರಲ್ಲಿ ಅಲ್ಲಾಹನ ಅಸ್ತಿತ್ವ ಮತ್ತು ಗುಣದ ಬಗ್ಗೆಯಿ-ರುವ ಜ್ಞಾನವೂ ಒಳಪಡುತ್ತದೆ. ಅಂದರೆ ತನ್ನ ಅಸ್ತಿತ್ವ ಮತ್ತು ಗುಣವಿಶೇಷಣಗಳ ಬಗ್ಗೆ ಏನೆಲ್ಲಾ ತಿಳಿಸಿಕೊಡಲು ಅಲ್ಲಾಹು ಬಯಸುತ್ತಾನೋ ಅವುಗಳನ್ನಲ್ಲದೆ ಬೇರೇನ-ನ್ನೂ ತಿಳಿಯಲು ನಮಗೆ ಸಾಧ್ಯವಿಲ್ಲ. ಅಲ್ಲಾಹನ ಜ್ಞಾನವು ಸಂಪೂರ್ಣವಾಗಿದ್ದು ಅದಕ್ಕೆ ಮಿತಿಯಿಲ್ಲ. ಅಲ್ಲಾಹನ

ಜ್ಞಾನಕ್ಕೆ ಹೋಲಿಸಿದರೆ ಅವನು ನಮಗೆ ತಿಳಿಸಿಕೊಟ್ಟ ಜ್ಞಾನವು ಬಹಳ ಕಡಿಮೆಯಾಗಿದೆ.

> ವಸಿಅ ಕುರ್ಸಿಯ್ಯುಹು ಸ್ಸಮಾವಾತಿ ವಲ್‌ಅರ್ಧ
> (ಅವನ ಕುರ್ಸೀ ಆಕಾಶಗಳನ್ನು ಮತ್ತು
> ಭೂಮಿಯನ್ನು ವಿಸ್ತರಿಸಿಕೊಂಡಿದೆ)

'ವಿಸ್ತರಿಸಿಕೊಂಡಿದೆ' (ವಸಿಅ) ಎಂದರೆ ಒಳಗೊಂಡಿದೆ ಎಂದರ್ಥ. ಅಂದರೆ ಅವನ ಕುರ್ಸೀ ಆಕಾಶಗಳನ್ನು ಮತ್ತು ಭೂಮಿಯನ್ನು (ಅಂದರೆ ಈ ಸಂಪೂರ್ಣ ವಿಶ್ವವನ್ನು) ಆವರಿಸಿಕೊಂಡಿದೆ ಮತ್ತು ಅವುಗಳಿಗಿಂತಲೂ ದೊಡ್ಡದಾಗಿದೆ. ಏಕೆಂದರೆ ಅದು ಅವುಗಳಿಗಿಂತಲೂ ದೊಡ್ಡದಲ್ಲದಿದ್ದರೆ ಅವುಗಳನ್ನು ಆವರಿಸಿಕೊಳ್ಳಲು ಸಾಧ್ಯವಿಲ್ಲ. 'ಕುರ್ಸೀ' ಎಂದರೆ ಅಲ್ಲಾಹನ ಎರಡು ಪಾದಗಳ ಸ್ಥಳವೆಂದು ಇಬ್ನ್ ಅಬ್ಬಾಸ್(ರ) ಹೇಳಿದ್ದಾರೆ. (ಅಲ್‌ಹಾಕಿಂ 2/282. ಇಮಾಮ್ ಅಹ್ಮದ್‌ರ ಮಗ ಅಬ್ದುಲ್ಲಾಹ್‌ರ ಕಿತಾಬುಸ್ಸುನ್ನ (586),

ಇಮಾಮ್ ಇಬ್ನ್ ಅಬೀ ಶೈಬಾರ ಕಿತಾಬುಲ್ ಅರ್ಶ್ (61) ಮತ್ತು ಇಮಾಮ್ ಇಬ್ನ್ ಖುಝೈಮರ ಕಿತಾಬು-ತ್ತೌಹೀದ್ (248) ನಲ್ಲಿ ಇದನ್ನು ಕಾಣಬಹುದು) ಕುರ್ಸೀ ಎಂದರೆ ಅರ್ಶ್ ಅಲ್ಲ. ಅರ್ಶ್ ಕುರ್ಸೀಗಿಂತ ದೊಡ್ಡದು. ಪ್ರವಾದಿಯವರು(ಸ) ಹೇಳುತ್ತಾರೆ: "ಕುರ್ಸೀಗೆ ಹೋಲಿ-ಸಿದರೆ ಭೂಮ್ಯಾಕಾಶಗಳು ಮರುಭೂಮಿಯಲ್ಲಿ ಎಸೆದ ಒಂದು ಉಂಗುರಕ್ಕೆ ಸಮಾನ. ಅರ್ಶ್‌ಗೆ ಹೋಲಿಸಿದರೆ ಕುರ್ಸೀ ಮರುಭೂಮಿಯಲ್ಲಿ ಎಸೆದ ಒಂದು ಉಂಗು-ರಕ್ಕೆ ಸಮಾನ." (ಅಲ್‌ಬೈಹಕಿ–ಅಲ್‌ಅಸ್ಮಾಉವಸ್ಸಿಫಾ-ತ್ 862. ಇಮಾಮ್ ಇಬ್ನ್ ಅಬೀ ಶೈಬಾರ ಕಿತಾಬುಲ್ ಅರ್ಶ್ (61) ನಲ್ಲೂ ಇದನ್ನು ಕಾಣಬಹುದು) ಕುರ್ಸೀ ಮತ್ತು ಅರ್ಶ್ ಅಲ್ಲಾಹನ ಸೃಷ್ಟಿಗಳಾಗಿದ್ದು ಅವುಗಳ ಮಹಾನತೆ ಅಲ್ಲಾಹನ ಸೃಷ್ಟಿ–ಸಾಮರ್ಥ್ಯ, ಮಹಾನತೆ ಮತ್ತು ಸಾರ್ವಭೌಮತೆಯನ್ನು ಸೂಚಿಸುತ್ತದೆ.

ವಲಾ ಯಊದುಹೂ ಹಿಫ್ಝುಹುಮಾ

(ಅವೆರಡರ ಸಂರಕ್ಷಣೆಯು ಅವನಿಗೆ ಭಾರವಾಗುವುದಿಲ್ಲ)

ಅವೆರಡರ ಸಂರಕ್ಷಣೆ ಎಂದರೆ ಆಕಾಶಗಳ ಮತ್ತು ಭೂಮಿಯ ಸಂರಕ್ಷಣೆ. ಅಂದರೆ ಈ ಸಂಪೂರ್ಣ ವಿಶ್ವದ ಸಂರಕ್ಷಣೆ ಮಾಡುವುದು ಅಲ್ಲಾಹನಿಗೆ ಸಂಬಂಧಿಸಿದಂ-ತೆ ಒಂದು ಭಾರವೇ ಅಲ್ಲ. ಈ ಸಂಪೂರ್ಣ ವಿಶ್ವವನ್ನು ನಿಯಂತ್ರಿಸುವುದು, ಅವುಗಳ ಸುಗಮ ನಿರ್ವಹಣೆಗೆ ಬೇಕಾದ ನಿಯಮಗಳನ್ನು ರಚಿಸುವುದು, ಅವುಗಳ ಪರಿಪಾಲನೆ ಮಾಡುವುದು ಎಲ್ಲವೂ ಸಂರಕ್ಷಣೆಯಲ್ಲಿ ಒಳಪಡುತ್ತದೆ.

ವಹುವಲ್ ಅಲಿಯ್ಯು (ಅವನು ಅತ್ಯುನ್ನತನು)

ಅಲ್ಲಾಹನ ಔನ್ನತ್ಯವು ಎರಡು ವಿಧಗಳಲ್ಲಿವೆ. ಒಂದು: ಅಸ್ತಿತ್ವದಲ್ಲಿರುವ ಔನ್ನತ್ಯ. ಅಂದರೆ ಅವನು ಅತ್ಯುನ್ನತ-

ದಲ್ಲಿರುವವನು. ಅಂದರೆ ಎತ್ತರದಲ್ಲಿರುವವನು. ಅವನು ಎಲ್ಲಾ ಸೃಷ್ಟಿಗಳ ಮೇಲ್ಭಾಗದಲ್ಲಿದ್ದಾನೆ. ಯಾರೂ ಅವನಿಗಿಂತ ಎತ್ತರದಲ್ಲಿ ಅಥವಾ ಅವನ ಮೇಲ್ಭಾಗದಲ್ಲಿಲ್ಲ. ಔನ್ನತ್ಯದಲ್ಲಿ ಅವನಿಗೆ ಸರಿಸಾಟಿಯಾಗಿ ಯಾರೂ ಇಲ್ಲ. ಎರಡನೆಯದು: ಗುಣವಿಶೇಷಣಗಳಲ್ಲಿರುವ ಔನ್ನತ್ಯ. ಅಂದರೆ ಅಲ್ಲಾಹನ ಗುಣವಿಶೇಷಣಗಳೆಲ್ಲವೂ ಅಪ್ಪಟ ಮತ್ತು ಸರಿಸಾಟಿಯಿಲ್ಲದ್ದು. ಅಲ್ಲಾಹನ ಗುಣವಿಶೇಷಣಗಳಿಗೆ ಸಮಾನವಾಗಿ ಅಥವಾ ಅವುಗಳಿಗಿಂತ ಉನ್ನತವಾದ ಗುಣವಿಶೇಷಣಗಳಿರುವವರು ಯಾರೂ ಇಲ್ಲ.

‘ಅಲ್ಅಲಿಯ್ಯ್’ ಅಲ್ಲಾಹನ ಅತಿಸುಂದರ ಹೆಸರುಗಳಲ್ಲಿ ಒಂದಾಗಿದೆ.

ಅಲ್ಅಝೀಮು
(ಮಹಾಮಹಿಮನು)

ಅಂದರೆ ಅತ್ಯಧಿಕ ಮಹಿಮೆಯುಳ್ಳವನು. ಶಕ್ತಿ, ಪ್ರತಿಷ್ಠೆ, ವೈಭವ, ಸಾರ್ವಭೌಮತೆ, ಅಧಿಕಾರ ಎಲ್ಲ ವಿಷಯ-

ಗಳಲ್ಲೂ ಸರಿಸಾಟಿಯಿಲ್ಲದವನು. ಈ ಜಗತ್ತಿನಲ್ಲಿರುವ ಸರ್ವಾಧಿಕಾರಿಗಳು, ಸಾಮ್ರಾಟರು, ಚಕ್ರವರ್ತಿಗಳು ಅವನ ಮುಂದೆ ತೃಣ ಸಮಾನ. ಅವರ ಯಾವುದೇ ಪ್ರಭಾವ, ಅಧಿಕಾರ ಅವನ ಮುಂದೆ ಯಾವುದೇ ಪರಿಣಾಮ ಬೀರುವುದಿಲ್ಲ.

‘ಅಲ್‌ಅಝೀಮ್’ ಅಲ್ಲಾಹನ ಅತಿಸುಂದರ ಹೆಸರುಗಳಲ್ಲಿ ಒಂದಾಗಿದೆ.